# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : M/s JSW Renew Energy Limited ಕಂಪನಿಯವರಿಗೆ ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕಿನ ಹಾಗೂ ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 45 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ನಂ. 1404
ದಿನಾಂಕ 7/6/22
ಬೆಂಗಳೂರು

ಓದಲಾಗಿದೆ: 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪತ್ರ ಸಂಖ್ಯೆ:KREDL/08/JSWREL-45 MW/ Davanagere/F-81(2021)/159, ದಿನಾಂಕ:20.01.2022.

2) ದಿನಾಂಕ:02.02.2022ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿ.

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದನ್ವಯ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s JSW Renew Energy Limited ರವರು ದಾವಣಗೆರೆ ಜಿಲ್ಲೆಯ, ದಾವಣಗೆರೆ ತಾಲ್ಲೂಕಿನ ಮಲ್ಲಕ್ಕನಹಳ್ಳಿ, ಮೆಲ್ಲೆಕಟ್ಟೆ, ಗೊಲ್ಲರ ಹಟ್ಟಿ, ಅಣಜಿ, ಆಲೂರುಹಟ್ಟಿ, ಲಿಂಗಾಪುರ, ಗಿರಿಯಾಪುರ, ಬೋರಗೊಂಡನಹಳ್ಳಿ, ತುಂಬಿಗೆರೆ, ಐಗೂರು, ಅಗಸನಕಟ್ಟೆ, ಜಮ್ಮಾಪುರ ಶಾಸ್ತ್ರೀ ಹಳ್ಳಿ, ರುದ್ರಕಟ್ಟೆ, ಕೆರಿಯಾಗಲಹಳ್ಳಿ, ಕಂದನಕೋವಿ, ಮುದ್ದೇನಹಳ್ಳಿ, ಶಿವಪುರ, ಕೊಗ್ಗನೂರು ಮತ್ತು ಸಿದ್ದನೂರು ಗ್ರಾಮಗಳಲ್ಲಿ 20 ಮೆ.ವ್ಯಾ. ಹಾಗೂ ದಾವಣಗೆರೆ ಜಿಲ್ಲೆಯ, ದಾವಣಗೆರೆ ತಾಲ್ಲೂಕಿನ ಹೆಬ್ಬಾಳು, ರಂಗೇನ ಮಟ್ಟಿ, ನಿಲಗಿ, ನರಗನಹಳ್ಳಿ, ಮಲ್ಲಕ್ಕನಹಳ್ಳಿ, ಗಂಗನ ಕಟ್ಟೆ, ಆನಗೋಡು, ಗುಮ್ಮನೂಸರು ಕಟ್ಟೆಹಳ್ಳಿ, ಉಲ್ಲಿನಕಟ್ಟೆ, ಹೊಸಹಳ್ಳಿ, ಮಂಗಳೂರು ಮೈಸಾರಹಳ್ಳಿ, ಲಂಬಾಣಿಕಟ್ಟೆ, ಕಟಿಹಳ್ಳಿ, ಬೆಂಚೆಕಟ್ಟೆ, ಹೊಳೆಕಲ್ಲು ಚಿನ್ನಸಮುದ್ರ, ಪಂಜೇನಹಟ್ಟಿ ಹಾಗೂ ಚಿತ್ರದುರ್ಗ ಜಿಲ್ಲೆಯ, ಚಿತ್ರದುರ್ಗ ತಾಲ್ಲೂಕಿನ, ಬರಮಸಾಗರ, ನಂದಿಹಳ್ಳಿ, ಬೇವಿನಹಳ್ಳಿ ಮತ್ತು ಹೆಮ್ಮನಘಟ್ಟ ಗ್ರಾಮಗಳಲ್ಲಿ 25 ಮೆ.ವ್ಯಾ. ಒಟ್ಟು 45 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಪಡೆಯುವ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕ್ರೆಡಲ್‌ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಕೇಂದ್ರ ಸರ್ಕಾರದ Power Grid Corporation of India Limited (PGCIL) ನ ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್ / ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡುವ ವರ್ಗದಡಿ ಪ್ರತಿ ವಿಂಡ್ ಟರ್ಬೈನ್ ಗೆ 4 ಎಕರೆಯಂತೆ Footprint basis ಲೆಕ್ಕೀಕರಿಸಿ, ಜಮೀನುಗಳನ್ನು ಉಪಯೋಗಿಸುವುದು ಮತ್ತು ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಮಾರ್ಗಸೂಚಿಯಂತೆ, ಅಳವಡಿಸುವ ಷರತ್ತುಗಳನ್ನು ವಿಧಿಸಿ, ಹಂಚಿಕೆ ನೀಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, M/s JSW Renew Energy Limited ರವರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಸದರಿಯವರು ಕೋರಿರುವ ಸ್ಥಳವು ಈಗಾಗಲೇ M/s Fortune Cotton & Agro Industries ರವರಿಗೆ 25 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ತಾತ್ವಿಕ ಅನುಮೋದನೆಯನ್ನು ನೀಡಲಾಗಿದ್ದು, ಸದರಿಯವರು ಕಾರಣಾಂತರಗಳಿಂದ ಯೋಜನೆಯನ್ನು ಅನುಷ್ಠಾನಗೊಳಿಸಲು ಸಾಧ್ಯವಾಗುವುದಿಲ್ಲ ವೆಂದು ಹಿಂಪಡೆದಿರುವುದಾಗಿ ತಿಳಿಸಿದ್ದ ಹಿನ್ನೆಲೆಯಲ್ಲಿ, ತಾತ್ವಿಕ ಅನುಮತಿಯನ್ನು ರದ್ದುಪಡಿಸಲು ಸರ್ಕಾರವನ್ನು ಕೋರಲಾಗಿತ್ತು. ಸದರಿ ಪ್ರಸ್ತಾವನೆಗೆ ಸರ್ಕಾರದ ಪತ್ರ ಸಂಖ್ಯೆ:ಎನರ್ಜಿ 152 ಎನ್‌ಸಿಇ 2021, ದಿನಾಂಕ:08.03.2022ರನ್ವಯ ಅನುಮತಿ ನೀಡಲಾಗಿರುತ್ತದೆ ಹಾಗೂ M/s CBM Corporation ರವರಿಗೆ ದಿನಾಂಕ:22.07.2021ರಂದು ನಡೆದ ರಾಜ್ಯ ಮಟ್ಟದ ಹಂಚಿಕೆ ಸಮಿತಿ ಸಭೆಯಲ್ಲಿ ತಾತ್ವಿಕ ಅನುಮತಿಗೆ ಅನುಮೋದನೆಗೊಂಡಿರುವ 20 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಅಭಿವೃದ್ಧಿದಾರರು ಕಾರಣಾಂತರಗಳಿಂದ ಯೋಜನೆಯನ್ನು ಅನುಷ್ಠಾನಗೊಳಿಸಲು ಸಾಧ್ಯವಾಗುವುದಿಲ್ಲ ವೆಂದು ಹಿಂಪಡೆದಿರುವುದಾಗಿ ತಿಳಿಸಿದ್ದು, ಈ ಸಂಬಂಧ ಸದರಿಯವರು ತಾತ್ವಿಕ ಅನುಮತಿಯನ್ನು ಹಿಂಪಡೆದಿರುವುದರಿಂದ ಪ್ರಸ್ತಾವನೆಯನ್ನು ಹಿಂತಿರುಗಿಸುವಂತೆ ಸರ್ಕಾರವನ್ನು ಕೋರಲಾಗಿತ್ತು. ಸದರಿ ಪ್ರಸ್ತಾವನೆಗೆ ಸರ್ಕಾರದ ಪತ್ರ ಸಂಖ್ಯೆ:ಎನರ್ಜಿ 150 ಎನ್‌ಸಿಇ 2021, ದಿನಾಂಕ:11.02.2022ರನ್ವಯ ಅನುಮತಿ ನೀಡಲಾಗಿರುತ್ತದೆ ಆದುದರಿಂದ ಸದರಿ ಸ್ಥಳವು ಹಂಚಿಕೆಗೆ ಲಭ್ಯವಿರುತ್ತದೆ ಎಂದು ಕೆ.ಆರ್. ಇ.ಡಿ.ಎಲ್. ರವರು ಅಭಿಪ್ರಾಯಿಸಿರುತ್ತಾರೆ.

MD KREDL

709
08.06.22

....2